ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಮೈಸೂರು

# ಬೆಳದಿಂಗಳ ಸಂಗೀತ 271

**18 ಸೆಪ್ಟೆಂಬರ್ 2024 * ಬುಧವಾರ * ಸಂಜೆ 6.00**

ದಿವ್ಯ ಸಾನ್ನಿಧ್ಯ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಸುತ್ತೂರು ಕ್ಷೇತ್ರ

## ಗಾಯನ



ವಿದುಷಿ ಪಾವನಿ ಭಾರದ್ವಾಜ್



ವಿದ್ವಾನ್ ರೂಪನಗುಡಿ ರತ್ನತೇಜ
ವಯೊಲಿನ್



ವಿದ್ವಾನ್ ಎಚ್.ಎಲ್. ಶಿವಶಂಕರಸ್ವಾಮಿ
ಮೃದಂಗ



ವಿದ್ವಾನ್ ಎಂ.ಎಸ್. ಜಯರಾಂ
ಘಟಂ

**ಸರ್ವರಿಗೂ ಹಾರ್ದಿಕ ಸುಸ್ವಾಗತ**

**ವಿದುಷಿ ಪಾವನಿ ಭಾರದ್ವಾಜ್‌ರವರು** ಸಂಗೀತದ ಕೌಟುಂಬಿಕ ಹಿನ್ನೆಲೆಯುಳ್ಳವರು. ಸುಪ್ರಸಿದ್ಧ ಹಾರ್ಮೋನಿಯಂ ವಾದಕರಾಗಿದ್ದ ವಿದ್ವಾನ್ ಅರುಣಾಚಲಪ್ಪನವರು ಇವರ ಮುತ್ತಾತ. ತಾತ ಗಾನಕಲಾಭೂಷಣ ವಿದ್ವಾನ್ ಎ. ವೀರಭದ್ರಯ್ಯನವರು. ಹಿರಿಯ ಪಿಟೀಲು ವಾದಕರಾಗಿದ್ದವರು ಮತ್ತು ಸಂಗೀತವಾದ್ಯಗಳನ್ನು ತಯಾರಿಸುವ ಅರುಣ ಮ್ಯೂಸಿಕಲ್ಸ್‌ನ ಸಂಸ್ಥಾಪಕರು. ತಂದೆ ವಿದ್ವಾನ್ ಎ.ವಿ. ಕಾಶೀನಾಥ್‌ರವರು, ಖ್ಯಾತ ಲಯವಾದ್ಯ ಕಲಾವಿದರು ಮತ್ತು ವಾದ್ಯಗಳ ತಯಾರಕರಾಗಿದ್ದರು. ತಾಯಿ ವಿದುಷಿ ಪುಷ್ಪಾ ಕಾಶೀನಾಥ್‌ರವರು ಆಕಾಶವಾಣಿಯ “ಎ” ಶ್ರೇಣಿ ವೀಣಾವಾದಕರು.

ಇಂಥ ಹಿನ್ನೆಲೆಯಿಂದ ಬಂದ ವಿದುಷಿ ಪಾವನಿ ಭಾರದ್ವಾಜ್‌ರವರಿಗೆ ಸಂಗೀತ ಸಹಜವಾಗಿ ಒಲಿದಿದೆ. ವಿದುಷಿ ಶ್ರೀಮತಿ ಆರ್. ಚಂದ್ರಿಕಾ, ಸಂಗೀತ ಕಲಾಚಾರ್ಯ ವಿದುಷಿ ನೀಲಾ ರಾಮಗೋಪಾಲ್, ಪದ್ಮಶ್ರೀ ಆರ್.ಎನ್. ತ್ಯಾಗರಾಜನ್ ಮತ್ತು ಸ್ವತಃ ಅವರ ತಾಯಿ ಸ್ವರಶ್ರೀ ಪುಷ್ಪಾ ಕಾಶೀನಾಥ್ ಮೊದಲಾದ ಸಂಗೀತ ದಿಗ್ಗಜರ ಗರಡಿಯಲ್ಲಿ ಇವರ ಪ್ರತಿಭೆ ಅರಳಿದೆ.

ವಿದುಷಿ ಪಾವನಿ ಭಾರದ್ವಾಜ್‌ರವರು ಎಂಎ (ಮ್ಯೂಸಿಕ್) ಪದವೀಧರರು. ಸ್ವರ್ಣಪದಕ ವಿಜೇತರು. ಭಕ್ತಿಗೀತೆ ಮತ್ತು ಸುಗಮಸಂಗೀತ ಈ ಎರಡೂ ವಿಭಾಗಗಳಲ್ಲಿ ಆಕಾಶವಾಣಿಯ “ಎ” ಶ್ರೇಣಿ ಕಲಾವಿದರು. ಬಯೊಮೆಡಿಕಲ್ ಇಂಜಿನಿಯರ್ ಪದವೀದರರು. “ಗರ್ಭಿಣಿಯರ ಮೇಲೆ ಭಾರತೀಯ ಔಷಧಿಗಳ ಪ್ರಭಾವ” ಎಂಬ ವಿಷಯವಾಗಿ ಸಂಶೋಧನೆ ನಡೆಸುತ್ತಿದ್ದಾರೆ. ಸಂಗೀತ ಚಿಕಿತ್ಸೆಯ ಪ್ರಭಾವವನ್ನು ಸಮರ್ಥವಾಗಿ ಪರಿಚಯಿಸುವ “ನಾದನಮಸ್ಕಾರ” ಎಂಬ ಇವರ ವಿಶಿಷ್ಟ ಸಂಸ್ಥೆಯ ಮೂಲಕ ಸಂಗೀತ, ಸತ್ಸಂಗ, ಧ್ಯಾನಸಂಗೀತ, ನಾದ–ಯೋಗ–ಧ್ಯಾನ, ನಾದಚಿಕಿತ್ಸೆ, ಗರ್ಭನಮಸ್ಕಾರ ಮುಂತಾದ ಕಾರ್ಯಕ್ರಮಗಳಲ್ಲದೆ ಸಂಗೀತದ ತರಗತಿಗಳೂ ನಡೆಯುತ್ತಿವೆ. ಅಸಂಖ್ಯಾತ ಪ್ರತಿಷ್ಠಿತ ವೇದಿಕೆಗಳಲ್ಲಿ ಸಂಗೀತವನ್ನು ಪ್ರಸ್ತುತಿ ಪಡಿಸಿ ರಸಿಕರ ಮತ್ತು ವಿಮರ್ಶಕರ ಪ್ರಶಂಸೆಗೆ ಭಾಜನರಾಗಿದ್ದಾರೆ. ಬೆಂಗಳೂರಿನ ಗಾಯನ ಸಮಾಜ, ಚೆನ್ನೈನ ಮದರಾಸ್ ಮ್ಯೂಸಿಕ್ ಅಕ್ಯಾಡೆಮಿಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ.

ಹಲವಾರು ರಾಷ್ಟ್ರೀಯ ಸಂಗೀತೋತ್ಸವಗಳಲ್ಲಿ ಭಾಗವಹಿಸಿ ಪ್ರಶಸ್ತಿ ಗಳಿಸಿದ್ದಾರೆ. ಅವಧಾನ ಪಲ್ಲವಿಯಲ್ಲಿ ಪ್ರಾತ್ಯಕ್ಷಿಕೆ ನೀಡಿದ ಅತ್ಯಂತ ಕಿರಿಯ ವಯಸ್ಸಿನ ಕಲಾವಿದರು. “ಎದೆ ತುಂಬಿ ಹಾಡುವೆನು” ಸ್ಪರ್ಧೆಯಲ್ಲಿ ರನ್ನರ್ ಅಪ್. ಕನ್ನಡ ಟಿವಿ ಸೀರಿಯಲ್‌ಗಳ ಹಲವಾರು ಶೀರ್ಷಿಕೆ ಗೀತೆಗಳು, ತಮಿಳು ಮತ್ತು ಹಿಂದಿಯ ಕಿರು ಚಲನಚಿತ್ರಗಳ ಹಿನ್ನೆಲೆ ಗಾಯಕಿ. ಲಯನ್ಸ್ ಕ್ಲಬ್ ಇಂಟರ್‌ನ್ಯಾಷನಲ್‌ನ “ಗಾನರತ್ನ”, ಅನನ್ಯ ನಾದಜ್ಯೋತಿ ಕಲಾ ಪುರಸ್ಕಾರ, ಪೂರ್ಣಪ್ರಜ್ಞ ಕಲಾನಿಕೇತನದ “ಕಲಾಶ್ರೀ”, ರಮಣಶ್ರೀ ಶರಣ ಉತ್ತೇಜನ ಪ್ರಶಸ್ತಿ ಇವರಿಗೆ ಸಂದಿರುವ ಕೆಲವು ಪ್ರಮುಖ ಪುರಸ್ಕಾರಗಳು.

**ವಿದ್ವಾನ್ ರೂಪನಗುಡಿ ರತ್ನತೇಜರವರು** ಪ್ರಾರಂಭಿಕ ಸಂಗೀತ ಶಿಕ್ಷಣವನ್ನು ವಿದ್ವಾನ್ ಅಶೋಕ್ ಗುರುಜಾಲೆಯವರ ಬಳಿ ಪಡೆದರು. ಅನಂತರ ದಿವಂಗತ ಶ್ರೀ ಪೇರಿ ಶ್ರೀರಾಮಮೂರ್ತಿಯವರಲ್ಲಿ ಶಿಷ್ಯವೃತ್ತಿಯನ್ನು ಮುಂದುವರಿಸಿದರು. ಪ್ರಸ್ತುತ ಡಾ. ಮೈಸೂರು ಮಂಜುನಾಥ್ ಅವರ ಬಳಿ ಉನ್ನತ ವಾದನದ ಸೂಕ್ಷ್ಮತೆಗಳನ್ನು ಅಭ್ಯಾಸ ಮಾಡುತ್ತಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಎಂಎ (ಮ್ಯೂಸಿಕ್) ಪದವೀಧರರು.

**ವಿದ್ವಾನ್ ಎಚ್.ಎಲ್. ಶಿವಶಂಕರಸ್ವಾಮಿಯವರು** ಸಂಗೀತ ಕ್ಷೇತ್ರದ ದಿಗ್ಗಜರಿಗೆ ಸಾಥ್ ನೀಡಿರುವರು. ಜುಗಲ್‌ಬಂದಿ ಕಾರ್ಯಕ್ರಮಗಳನ್ನೂ ನೀಡಿದ್ದಾರೆ. ಕರ್ನಾಟಕ ಗಾನಕಲಾ ಪರಿಷತ್ತಿನಿಂದ "ಉತ್ತಮ ಮೃದಂಗ ಕಲಾವಿದರು" ಎಂದು ಪುರಸ್ಕೃತರಾಗಿರುವವರು. ಏಳು ಮೃದಂಗಗಳ ಮೂಲಕ ರಾಗಸಂಚಾರಗಳನ್ನು ತೋರಿಸುವ ಅಪರೂಪದ ಕೌಶಲ ಉಳ್ಳವರು. ಮೈಸೂರಿನ "ಲಯ ವಿದ್ಯಾ ಪ್ರತಿಷ್ಠಾನ" ಸಂಸ್ಥೆಯ ಸ್ಥಾಪಕರು. ಇವರ ಪ್ರಸ್ತುತಪಡಿಸುವ "ಲಯ ಲಹರಿ" ಫ್ಯೂಷನ್ ಕಾರ್ಯಕ್ರಮ ತುಂಬ ಜನಪ್ರಿಯವಾಗಿದೆ.

**ವಿದ್ವಾನ್ ಎಂ.ಎಸ್. ಜಯರಾಂರವರು** ಮೈಸೂರಿನ ತಾಳವಾದ್ಯ ಕಲಾವಿದರಲ್ಲಿ ಒಬ್ಬರಾಗಿದ್ದ ವಿದ್ವಾನ್ ಎಂ.ಎಸ್. ಶೇಷಪ್ಪನವರ ಸುಪುತ್ರರು; ಲಯವಾದ್ಯದ ಕಡೆ ಸಹಜವಾಗಿಯೇ ಇವರ ಆಸಕ್ತಿ ಬೆಳೆಯಿತು. ತಂದೆ ಹಾಗೂ ದೊಡ್ಡಪ್ಪ ಶ್ರೀ ಎಂ.ಎಸ್. ರಾಮಯ್ಯನವರ ಬಳಿ ಮೃದಂಗ, ತಬಲಾ ಮತ್ತು ಘಟಂ ವಾದ್ಯಗಳನ್ನು ಅಭ್ಯಾಸ ಮಾಡಿದ್ದಾರೆ. ಅರಮನೆಯ ವಾದ್ಯಗೋಷ್ಠಿಯಲ್ಲಿ 32 ವರ್ಷ ತಬಲಾ ಕಲಾವಿದರಾಗಿ ಎರಡು ವರ್ಷ ಬ್ಯಾಂಡ್ ಮಾಸ್ಟರ್ ಆಗಿ ಸೇವೆ ಸಲ್ಲಿಸಿದ್ದಾರೆ. ಆಕಾಶವಾಣಿಯ ಬಿ–ಹೈ ಶ್ರೇಣಿಯ ಕಲಾವಿದರು. ಉಡುಪಿಯ ರಾಜಾಂಗಣದಲ್ಲಿ ಉತ್ತಮ ಮೃದಂಗ ವಾದಕರೆಂದು ಹಾಗೂ ಮೈಸೂರಿನ ರಾಮೋತ್ಸವದಲ್ಲಿ ಲಯನಾದಾಸಕ್ತರೆಂದು ಬಿರುದು ಪಡೆದಿದ್ದಾರೆ. ಬೆಂಗಳೂರಿನ ಶಾರದಾ ಶೃಂಗೇರಿ ಮಠ ಹಾಗೂ ಮೈಸೂರಿನ ಗಾನಭಾರತಿಯಿಂದ ಸನ್ಮಾನಿತರಾಗಿರುವವರು.

# ಬೆಳದಿಂಗಳ ಸಂಗೀತ 272

**17 ಅಕ್ಟೋಬರ್ 2024**

**ಗಾಯನ**

**ಡಾ. ಸಿದ್ರಾಮಪ್ಪ ಪೊಲೀಸ್ ಪಾಟೀಲ್**



**ಹಾರ್ಮೋನಿಯಂ**

**ಪಂ. ವೀರಭದ್ರಯ್ಯ ಹಿರೇಮಠ್**



**ತಬಲ**

**ಪಂ. ಭೀಮಾಶಂಕರ ಬಿದನೂರು**

ಫೋನ್: 0821–2548221, 2548223 * ಇಮೇಲ್: sutturmath@jssonline.org